5C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 73/2022

**ದಿನಾಂಕ ಃ 27.08.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.**

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ .ಎಂ ವಕೀರಿಲಂದ ಃ**

1) 1 ಮತ್ತು 2 ನೇ ಆರೋಪಿರು, ನಮಗೆ ಹೊಸ ಸಂಬಂಧವಾಗಿದ್ದರು. ನಮ್ಮ ಕಿರಗಸೂರಿನಿಂದ, 1 ನೇ ಆರೋಪಿ ನಿತೀಶ್ ಕುಮಾರ್ ರವರ ವಡ್ಡರಹಳ್ಳಿ ಊರಿಗೆ 18 ಕಿ.ಮೀ ದೂರ ಇದೆ. ನನ್ನ ಮಗಳಿಗೆ ಹೆಣ್ಣನ್ನು ತೋರಿಸುವುದಕ್ಕೆ ಮಧ್ಯಸ್ತಿಕೆಯನ್ನು ವಡ್ಡರಹಳ್ಳಿ ಗ್ರಾಮದವರು ವಹಿಸಿದ್ದರು. ಸದರಿ ಮಧ್ಯಸ್ತಿಕೆದಾರರು, ನಮ್ಮ ಸಂಬಂಧಿಕರಲ್ಲ. ಮಧ್ಯಸ್ತಿಕೆದಾರರು, 3 ಸಲ 1 ನೇ ಆರೋಪಿ ನಿತೀಶ್ ಕುಮಾರ್ ನ್ನು, ನನ್ನ ಮಗಳನ್ನು ನೋಡುವುದಕ್ಕೆ, ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ನಾವು, 2 ಸಲ ಆರೋಪಿತರ ಮನೆಗೆ ಹೋಗಿದ್ದೆವು. ನಾವು ಆರೋಪಿತರ ಮನೆಗೆ ನೋಡಲು ಹೋಗಿದ್ದಾಗ, 1 ನೇ ಆರೋಪಿ ನಿತೀಶ್ ಕುಮಾರ್ ಗೆ ಏನು ಕೆಲಸ ಮಾಡುತ್ತೀಯಾ ಎಂದು ವಿಚಾರಿಸಿದಾಗ, ಕಂಪ್ಯೂಟರ್ ಕೆಲಸ ಮಾಡುತ್ತೇನೆ ಅಂತ ಹೇಳಿದ್ದನು. ನನ್ನ ಮಗಳು, 2nd PUC ಓದಿಕೊಂಡಿದ್ದಳು. 1 ನೇ ಆರೋಪಿ ನಿತೀಶ್ ಕುಮಾರ್, ಏನು ಓದಿದ್ದಾರೆ ಅಂತ ನಾನು ಕೇಳಲಿಲ್ಲ, ಕೆಲಸದಲ್ಲಿ ಇದ್ದೇನೆ ಅಂತ ಹೇಳಿದ್ದನು. 1 ನೇ ಆರೋಪಿ ತಂದೆಯಾದ, 2 ನೇ ಆರೋಪಿ ಹೊನ್ನಯ್ಯನಿಗೆ ಏನು ಆಸ್ತಿ ಇದೆ ಕೇಳಿದಾಗ, ವಡ್ಡರಹಳ್ಳಿಯಲ್ಲಿ ಒಂದು ಮನೆ, 2 ಎಕರೆ ಜಮೀನು ಇದೆ, ನಿಡಘಟ್ಟದಲ್ಲಿ 30 ಗುಂಟೆ ಗದ್ದೆ ಇದೆ, ಮಳವಳ್ಳಿಯಲ್ಲಿ ಒಂದು ಸೈಟು ಇದೆ ಎಂದು ಹೇಳಿದ್ದರಿಂದ, ನಾನು ನನ್ನ ಮಗಳನ್ನು ಕೊಟ್ಟಿದ್ದೆವು. ನನ್ನ ಮಗಳನ್ನು ಮದುವೆ ಮಾಡಿಕೊಟ್ಟಾಗ, 2 ನೇ ಆರೋಪಿ ಹೊನ್ನಯ್ಯ ಕೆ.ಇ.ಬಿ ಕೆಲಸದಲ್ಲಿ ಇದ್ದರು.

2) ನನಗೆ ಇದ್ದುದು ಒಬ್ಬಳೇ ಮಗಳು. ಆಕೆಯೇ ಮೃತ ಮಾಲಿನಿಯಾಗಿದ್ದಾಳೆ. ಮದುವೆ ಮಾತುಕತೆಗೆ, ನಮ್ಮ ಕಡೆಯಿಂದ, ನಮ್ಮ ಊರಿನ ಯಜಮಾನರು, ನನ್ನ ಯಜಮಾನರು ಮತ್ತು ನಾನು ಇದ್ದೆವು. ಊರಿನ ಯಜಮಾನರ ಹೆಸರು, ಮೂಗು ಮಾವ ಮತ್ತು ಕೆಂಪಣ್ಣ,

ಇವರು ನಮ್ಮ ಊರಿನವರೇ. ಆರೋಪಿ ಕಡೆಯಿಂದ, 1 ನೇ ಆರೋಪಿಯ ತಂದೆಯಾದ 2 ನೇ ಆರೋಪಿ, 1 ನೇ ಆರೋಪಿ ಹಾಗೂ 1 ನೇ ಆರೋಪಿಯ ಸೋದರ ಮಾವ, ಅಕ್ಕ - ಭಾವ ಮತ್ತು ದೊಡ್ಡಮ್ಮ ಬಂದಿದ್ದರು. ನಮ್ಮ ಹಿಂದೂ ಸಂಪ್ರದಾಯದಲ್ಲಿ, ಹುಡುಗ ಮತ್ತು ಹುಡುಗಿ ಇಚ್ಛೆ ಪಟ್ಟು ಮದುವೆ ಆಗಿದ್ದಾಗ, ಅವರು, ಏನು ಕೇಳದೇ ಇದ್ದರೂ ಸಹ, ಒಡವೆ, ಹಣ, ಸಾಮಾಗ್ರಿಗಳನ್ನು ಕೊಡುವ ಸಂಪ್ರದಾಯ ಇದೆ ಹಾಗೂ ನಾನು ಒಡವೆ, ಹಣ ಮತ್ತು ಸಾಮಾಗ್ರಿಗಳನ್ನು ಕೊಟ್ಟಿದ್ದೆನು ಎಂದು ಸಾಕ್ಷಿ ಹೇಳುತ್ತಾರೆ. ನನ್ನ ಮಗಳಿಗೆ, 1 ನೇ ಆರೋಪಿಯ ಮನೆಯವರು, ಸಂಪ್ರದಾಯದಂತೆ, ಒಂದು ತಾಳಿ, ಒಂದು ಜೊತೆ ಕಾಲುಂಗುರ, ಕಾಲು ಚೈನು ಮತ್ತು 2 ಸೀರೆಗಳನ್ನು ಮಾತ್ರ ಕೊಟ್ಟಿದ್ದರು. ನನ್ನ ಮಗಳಿಗೆ ಅವಳ ಮದುವೆಯ ದಿವಸ, ಒಂದು ಮಾಂಗಲ್ಯ ಸರ, ಕಿವಿಗೆ ಯಾಂಗಿಗ್ಸ್, ಗೆಜ್ಜೆ ಮಾಟಿ ಮತ್ತು ಒಂದು ಉಂಗುರವನ್ನು ಕೊಟ್ಟಿದ್ದನು. 2 ನೇ ಆರೊಪಿ ಹೊನ್ನಯ್ಯ, ನಿಮ್ಮ ಮಗಳನ್ನು, ನನ್ನ ಮಗನಿಗೆ ಕೊಡಿ (1 ನೇ ಆರೋಪಿಗೆ) ಮದುವೆ ಮಾಡಿಕೊಳ್ಳುತ್ತೇವೆ ಎಂದಿದ್ದರು. ಮದುವೆ ಮಾತುಕತೆಗೆ ಸೇರಿದಾಗ, ಮಧ್ಯಸ್ತಿಕೆದಾರರು, 1 ನೇ ಆರೋಪಿಯ ಸೋದರಮಾವ, 1 ನೇ ಆರೋಪಿಗೆ, ಒಂದು ಸರ, ಒಂದು ಬ್ರಾಸ್ಲೈಟ್ ಮತ್ತು ಒಂದು ಉಂಗುರವನ್ನು ಕೊಡಿ ಅಂತ ಕೇಳಿದ್ದರು, ಆಗ ನಾವು, 1 ನೇ ಆರೋಪಿಗೆ, ಒಂದು ಉಂಗುರವನ್ನು ಕೊಡುತ್ತೇವೆ ಮತ್ತು ಚೌಲ್ಟ್ರಿಯಲ್ಲಿ ಮದುವೆ ಮಾಡಿಕೊಡುವುದಾಗಿ ಹೇಳಿದ್ದೆವು ಮತ್ತು 1 ತಿಂಗಳು ಆದ ಮೇಲೆ ಬ್ರಾಸ್ಲೈಟ್ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದೆವು, ಆದರೆ ಬ್ರಾಸ್ಲೈಟ್‌ನ್ನು ಮಾಡಿಸಿಕೊಡಲು ಆಗಲಿಲ್ಲ, ಆದ್ದರಿಂದ ಬ್ರಾಸ್ಲೈಟ್ ಗೆ ಬದಲು, 1 ನೇ ಆರೋಪಿಗೆ 50 ಸಾವಿರ ಹಣವನ್ನು ಮದುವೆಯಾದ ಒಂದು ತಿಂಗಳ ನಂತರ ಕೊಟ್ಟಿದ್ದೆವು. 50 ಸಾವಿರ ರೂ. ಹಣವನ್ನು ನನ್ನ ಮಗಳ ಕೈಗೆ ಕೊಟ್ಟು, ನಿನ್ನ ಗಂಡನಿಗೆ ಬ್ರಾಸ್ಲೈಟ್ ಮಾಡಿಸಿಕೋ ಎಂದು ಹೇಳಿದೆನು, ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿ ಸಹ ಇದ್ದರು. 1 ನೆ ಆರೋಪಿ ಬ್ರಾಸ್ಲೈಟ್‌ನ್ನು ಮಾಡಿಸಿಕೊಂಡಿದ್ದರೋ, ಇಲ್ಲವೋ ಎಂದು ಗೊತ್ತಿಲ್ಲ.

3) ನನ್ನ ಮಗಳ ಮದುವೆ ಆದ ಮೇಲೆ, 1 ನೇ ಆರೋಪಿ ಮನೆಯಲ್ಲಿ, ಆರೋಪಿತರು, ಅಕ್ಕ - ಭಾವ ಮತ್ತು ದೊಡ್ಡಮ್ಮ ಇದ್ದರು. ಮದುವೆಯಾಗಿ ಒಂದು ತಿಂಗಳು ಆದ ಮೇಲೆ, 1 ನೇ ಆರೋಪಿಯ ಅಕ್ಕ-ಭಾವ ಮತ್ತು ದೊಡ್ಡಮ್ಮ ಹೊರಟು ಹೋದರು. ಆರೋಪಿತರು, ವಡ್ಡರಹಳ್ಳಿಯಲ್ಲಿ ವಾಸ ಇದ್ದರು. 1 ನೇ ಆರೋಪಿ, ಮಳವಳ್ಳಿಯಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದರು. ನನ್ನ ಮಗಳು ಮದುವೆಯಾದ ನಂತರ, ಆಕೆಯ ಮನೆಗೆ, ವಾರಕ್ಕೆ ಒಂದು ಸಲ, ತಿಂಗಳಿಗೆ ಒಂದು ಸಲ ಹೋಗಿ ನೋಡಿಕೊಂಡು ಬರುತ್ತಿದ್ದೆನು. ನನ್ನ ಮಗಳ ಇಬ್ಬರೂ

ಮಕ್ಕಳಾದ ಅಪ್ಪು ಮತ್ತು ಅವೀಸ್ ರವರ ಬಾಣಂತನವನ್ನು ನಮ್ಮ ಮನೆಯಲ್ಲಿ ಮಾಡಿದ್ದೆನು. ನನ್ನ ಮಗಳು ಮದುವೆಯಾದ ನಂತರ, 2 ವರುಷಗಳು ಚೆನ್ನಾಗಿ ಇದ್ದಳು. ಈ 2 ವರುಷದಲ್ಲಿ, ನನ್ನ ಮಗಳ ಹತ್ತಿರ ಮೊಬೈಲ್ ಇದ್ದು, ಮೊಬೈಲ್ ನ್ನು ಬಳಸುತ್ತಿದ್ದಳು. ನನ್ನ ಹತ್ತಿರವೂ ಸಹ ಮೊಬೈಲ್ ಇದ್ದು, ನಾನೂ ಸಹ ಮೊಬೈಲ್ ನ್ನು ಬಳಸುತ್ತಿದ್ದೆನು. ನಮ್ಮ ಮಗಳು 2 ವರುಷ ಚೆನ್ನಾಗಿ ಇದ್ದ ಅವಧಿಯಲ್ಲಿ, ಹಬ್ಬ ಹರಿದಿನಗಳಲ್ಲಿ, ನಾವು ಆರೋಪಿತರ ಮನೆಗೆ ಹೋಗುತ್ತಿದ್ದೆವು, ಮತ್ತು ಆರೋಪಿತರು ಸಹ ನಮ್ಮ ಮನೆಗೆ ಬರುತ್ತಿದ್ದರು.

4) ನನ್ನ ಮಗಳು ಗಂಡನ ಮನೆಯಲ್ಲಿ ಇದ್ದಂತಹ ಸಂದರ್ಭದಲ್ಲಿ , ನಾನು ಆಕೆಯ ಮನೆಗೆ ಹೋಗಿದ್ದಾಗ, 2 ನೇ ಆರೋಪಿ ಹೊನ್ನಯ್ಯ, ನನ್ನ ಮಗಳಿಗೆ, ‘‘ ಆಯ್ದುಕೊಂಡು ತಿನ್ನುವ ಸೂಳೆ ಮಕ್ಕಳು, ಇಂತಹ ಮನೆಗೆ ಹೆಣ್ಣಿಗೆ ಹೋದೆನು ನಾನು, ನನ್ನ ಮಗಳಿಗೆ ಕಾರನ್ನು ಕೊಡಿಸಿದ್ದೇನೆ, ವಸ್ತು, ಒಡವೆಳನ್ನೆಲ್ಲಾ ತೆಗೆದುಕೊಟ್ಟಿದ್ದೇನೆ, ಉಣ್ಣುಕೊಂಡು ಉಣ್ಣುಕೊಂಡು ಮನೆಯಲ್ಲಿ ಕೂತಿದ್ದಾಳೆ, ಕೂಲಿಗೆ ಹೋಗು, ನಿನ್ನ ಮಕ್ಕಳನ್ನು ಸಾಕುತ್ತೇನೆ ’’ ಅಂತ ನನ್ನ ಮಗಳಿಗೆ ಬೈಯ್ಯುತ್ತಿದ್ದನು. ಆಗ ಈ ವಿಷಯವನ್ನು, ನನ್ನ ಅಳಿಯನಾದ 1 ನೇ ಆರೋಪಿಗೆ ತಿಳಿಸಿದಾಗ, 1 ನೇ ಆರೋಪಿ, ನನ್ನ ಅಪ್ಪ ಇರುವುದೇ ನಿನಗೆ ಬೈಯ್ಯುವುದಕ್ಕೆ , ಬೈಯಿಸಿಕೊ ಅಂತ ಏಟಿನಿಂದ ಚೆನ್ನಾಗಿ ನನ್ನ ಮಗಳಿಗೆ ಚಚ್ಚಿದನು. ಈ ವಿಷಯವನ್ನು ಅಲ್ಲಿ ಇದ್ದ ಅಕ್ಕ ಪಕ್ಕದ ಮನೆಯವರಿಗೆ ಯಾರಿಗೂ ತಿಳಿಸಲಿಲ್ಲ, ಯಾಕೆಂದರೆ, ನನ್ನ ಮಗಳ ಸಂಸಾರ ಚೆನ್ನಾಗಿ ಇರಬೇಕು, ಹೊಡೆದು ಹೋಗಬಾರದು, ಏನಾದರೂ ಇದನ್ನೆಲ್ಲ ಅಕ್ಕ ಪಕ್ಕದವರ ಮನೆಗೆ ಹೇಳಿದರೆ, ನನ್ನ ಮಗಳ ಸಂಸಾರ ಹಾಳಾಗಬಹುದು ಎಂದು ಅಕ್ಕ ಪಕ್ಕದವರಿಗೆ ಯಾರಿಗೂ ತಿಳಿಸಲಿಲ್ಲ. ಇವರ ಮನೆಗೆ ಯಾಕಪ್ಪ ನನ್ನ ಮಗಳನ್ನು ಕೊಟ್ಟೆ ಎಂದು ನನ್ನ ಮಗಳಿಗೆ ಸಮಾಧಾನ ಹೇಳಿ, ಅತ್ತುಕೊಂಡು ನಾನು ಮನೆಗೆ ಬಂದುಬಿಟ್ಟೆನು.

5) ಮನೆಗೆ ಬಂದ ಮೇಲೆ ಈ ವಿಷಯವನ್ನು, ನನ್ನ ಯಜಮಾನರಿಗೆ ಹೇಳಿದೆನು. ನಾನು ಮತ್ತು ನನ್ನ ಗಂಡ ಇಬ್ಬರೂ, ಈಗೆ ಚಿತ್ರ ಹಿಂಸೆ ಕೊಡುತ್ತಿದ್ದಾರಲ್ಲ, ಇರುವ ಒಬ್ಬ ಮಗಳನ್ನು ಅವರ ಮನೆಗೆ ಕೊಟ್ಟು, ಈ ರೀತಿ ಕಣ್ಣಿರಲ್ಲಿ ಕೈ ತೊಳೆಸುತ್ತೀದ್ದಾರಲ್ಲ ಅಂತ ಮಾತನಾಡಿಕೊಂಡೆವು. ಮದುವೆ ಮಾತುಕತೆಗೆ ಸೇರಿದ ವ್ಯಕ್ತಿಗಳಿಗೆ , ಈ ಘಟನೆ ಬಗ್ಗೆ ತಿಳಿಸಲಿಲ್ಲ. ಈ ಘಟನೆಯಿಂದ, ಬೇಜಾರುಗೊಂಡಿದ್ದರಿಂದ 3 ರಿಂದ 4 ತಿಂಗಳು, ನನ್ನ ಮಗಳ ಮನೆಗೆ ಹೋಗಿರಲಿಲ್ಲ. 3 ರಿಂದ 4 ತಿಂಗಳಲ್ಲಿ , ನಾನಾಗಲೀ, ನನ್ನ ಗಂಡನಾಗಲೀ , ನನ್ನ ಮಕ್ಕಳಾಗಲೀ ಯಾರು ನನ್ನ ಮಗಳ

ಮನಗೆ ಹೋಗಲಿಲ್ಲ. ಆರೋಪಿತರ ಕುಟುಂಬದಿಂದ , 1 ನೇ ಆರೋಪಿಯಾಗಲೀ , ನನ್ನ ಬೀಗರಾಗಲೀ, ನಮ್ಮ ಮನೆಗೆ ಬಂದಿರಲಿಲ್ಲ. ನಮ್ಮ ಹತ್ತಿರ ಇದ್ದ ಮೊಬೈಲ್ ಫೋನ್ ನಲ್ಲಿ ಮಾತನಾಡುತ್ತಿದ್ದೆವು. ನನ್ನ ಮಗಳು ನನ್ನ ಜೊತೆಯಲ್ಲಿ ಹೇಳಿಕೊಳ್ಳುತ್ತಿದ್ದುದಲ್ಲೆ, 1 ನೇ ಆರೋಪಿಯ ಮೊಬೈಲ್ ಗೆ ಹೋಗುತಿತ್ತು. 1 ನೇ ಅರೋಪಿ, ನನ್ನ ಮಗಳ ಮೊಬೈಲ್ ನ್ನು ಕಿತ್ತುಕೊಂಡಿದ್ದನು. 1 ನೇ ಆರೋಪಿಗೆ ಮತ್ತೆ ನಾವು ಹಣವನ್ನು ಕೊಡಲಿಲ್ಲ. 3 ಸಲ, ಆರೋಪಿಗಳು, ನನ್ನ ಮಗಳಿಗೆ, ಬಾಕಿ ಕೂಡಬೇಕಾಗಿರುವ 50 ಸಾವಿರ ರೂ. ಹಣವನ್ನು ಪಡೆದುಕೊಂಡು ಬಾ ಅಂತ ಕಳುಹಿಸಿದ್ದರು. ಕಷ್ಟನೋ, ಸುಖಾನೋ, 50 ಸಾವಿರ ರೂ. ಹಣವನ್ನು ಕೊಡುತ್ತೇವೆ ಅಂತ ನನ್ನ ಮಗಳನ್ನು ಕರೆದುಕೊಂಡು ಹೋಗಿ ಆರೋಪಿ ಮನೆಗೆ ಬಿಟ್ಟು ಬಂದೆವು. ನನ್ನ ಮಗಳಳು ತೀರಿಕೊಳ್ಳುವ 6 ತಿಂಗಳು ಅಥವಾ 1 ವರುಷದ ಹಿಂದೆ ನನ್ನ ಮಗಳನ್ನು, ವಾಪಸ್ಸು ಆರೋಪಿ ಮನಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿದ್ದೆವು. ಈ ವಿಚಾರಕ್ಕೆ ಪೊಲೀಸ್ ಠಾಣೆಗೆ ದೂರನ್ನು ಕೊಡಲಿಲ್ಲ, ಯಾಕೆಂದರೆ, ನನ್ನ ಮಗಳ ಸಂಸಾರ ಹಾಳಾಗಬಾರದು ಎಂಬ ಕಾರಣದಿಂದ ದೂರನ್ನು ಕೊಡಲಿಲ್ಲ.

6) ನನ್ನ ಮಗಳಿಗೆ ಆರೋಪಿಗಳು ಕೊಡುತ್ತಿದ್ದ ಹಿಂಸೆಯನ್ನು, ನನ್ನ ಮಗಳು, ನನಗೆ, ನನ್ನ ಗಂಡನಿಗೆ ಮತ್ತು ನನ್ನ ಮಕ್ಕಳಿಗೆ ಹೇಳಿಕೊಳ್ಳುತ್ತಿದ್ದಳು. ಯಾಕೆ ಈ ರೀತಿ ಹಿಂಸೆ ಕೊಡುತ್ತಿದ್ದಾರೆ ಅಂತ ನಾನು ಫೋನ್ ನಲ್ಲಿ ಕೇಳಿದ್ದಕ್ಕೆ, ಬಾಕಿ 50 ಸಾವಿರ ರೂ. ಹಣವನ್ನು ಕೊಟ್ಟಿಲ್ಲವಲ್ಲ, ಅದಕ್ಕೆ ಹಿಂಸೆ ಕೊಡುತ್ತಿದ್ದಾರೆ ಅಂತ ಹೇಳಿದ್ದಳು. ನಮ್ಮ ಊರಿನಿಂದ, ಆರೋಪಿಗಳ ಮನೆಗೆ ಬಸ್ ನಲ್ಲಿ ಹೋಗಲು ಅರ್ಧ ಗಂಟೆ ಸಾಕು ಎಂದರೆ , ಸಾಕ್ಷಿಯು, 1 ಗಂಟೆ ಆದರೂ ಆಗಬಹುದು, 2 ಗಂಟೆ ಆದರೂ ಆಗಬಹುದು, ಬಸ್ ಸಿಕ್ಕಿದಂತೆ ಎಂದು ಉತ್ತರಿಸುತ್ತಾರೆ. ನನ್ನ ಮಗಳಿಗೆ ಹೊಡೆದು ಚಿತ್ರ ಹಿಂಸೆಯನ್ನು ಕೊಡುತ್ತಿದ್ದರಿಂದ, ನಾನು ಆರೋಪಿ ಮನೆಗೆ ಹೋಗಿ, ನನ್ನ ಮಗಳನ್ನು ಕಳುಹಿಸಿಕೊಡಿ, 4 ದಿನ ಸಮಾಧಾನ ಮಾಡಿ ಕಳುಹಿಸುತ್ತೇನೆ ಅಂತ ಆರೋಪಿಗಳಿಗೆ ಕೇಳಿಕೊಂಡಾಗ, ಕಳುಹಿಸುವುದಿಲ್ಲ, ಭಾನುವಾರ ನಿಮ್ಮ ಮಗಳನ್ನು ಕರೆದುಕೊಂಡು ಬರುವುದಾಗಿ 1 ನೇ ಆರೋಪಿ ನನಗೆ ಹೇಳಿ, ಮೊಮ್ಮಕ್ಕಳನ್ನು ಮಾತ್ರ ನನ್ನ ಜೊತೆಯಲ್ಲಿ ಕಳುಹಿಸಿದ್ದನು. ನಾನು ನನ್ನ ಮೊಮ್ಮಕ್ಕಳನ್ನು ಕರೆದುಕೊಂಡು ಮನೆಗೆ ಬಂದೆನು. ಭಾನುವಾರ, ನನ್ನ ಮಗಳಿಗೆ, ಆರೋಪಿಗಳು ಹೊಡೆದು ಸಾಯಿಸಿದ್ದರು.

7) ಭಾನುವಾರ ಬೆಳಿಗ್ಗೆ , ನಿಮ್ಮ ಮಗಳು, ನೇಣು ಹಾಕಿಕೊಂಡಿದ್ದಾಳೆ, ಆಸ್ಪತ್ರೆಯಲ್ಲಿ ಇದ್ದಾಳೆ ಅಂತ ನನಗೆ ಫೋನ್ ಬಂದಾಗ, ಯಾರು ಯಾರು ಆಸ್ಪತ್ರೆಗೆ ಹೋಗಿದ್ದಿರಿ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ನನ್ನ ಮಗಳು ನೇಣುಹಾಕಿಕೊಂಡು ಸತ್ತಿಲ್ಲ, ಅವಳನ್ನು ಆರೋಪಿಗಳು ಸಾಯಿಸಿದ್ದಾರೆ ಎಂದು ಹೇಳುತ್ತಾರೆ. ಆಸ್ಪತ್ರೆಗೆ, ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಹೋಗಿದ್ದೆವು. ಆಸ್ಪತ್ರೆಯಲ್ಲಿ 1 ಮತ್ತು 2 ನೇ ಆರೋಪಿಗಳು ಇರಲಿಲ್ಲ, ಆರೋಪಿಗಳು ಪೋಲಿಸ್ ಠಾಣೆಗೆ ಹೋಗಿ ಕುಳಿತಿದ್ದರು. ಆಸ್ಪತ್ರೆ ಮತ್ತು ಪೊಲೀಸ್ ಠಾಣೆ ಒಂದೇ ಕಾಂಪೌಂಡ್ ಒಳಗೆ ಇದೆ ಎಂದರೆ ಸಾಕ್ಷಿಯು ದೂರ ದೂರ ಇದೆ ಎಂದು ಉತ್ತರಿಸುತ್ತಾರೆ , ಹಾಗೂ ಒಂದೇ ಕಾಂಪೌಂಡ್ ಇದೆಯೋ, ಇಲ್ಲವೋ ಅಂತ ನಾವು ಗಾಬರಿಯಲ್ಲಿ ಇದ್ದುದ್ದರಿಂದ ನೋಡಲು ಆಗಲಿಲ್ಲ ಎನ್ನುತ್ತಾರೆ. ಜನರಲ್ ಆಸ್ಪತ್ರೆ ಯಿಂದ ಪೊಲೀಸ್ ಠಾಣೆಗೆ ಎಷ್ಟು ದೂರ ಆಗುತ್ತದೆ ಎಂದರೆ ಸಾಕ್ಷಿಯು, ಸುಮಾರು ದೂರ ಇದೆ ಎಂದು ಉತ್ತರಿಸುತ್ತಾರೆ. ನಾವು ಗಾಬರಿಗೊಂಡಿದ್ದರಿಂದ ಆಸ್ಪತ್ರೆಯಲ್ಲಿ ಯಾರು ಯಾರು ಇದ್ದರು ಅಂತ, ಯಾರು ಯಾರು ಬಂದಿದ್ದರು ಅಂತ ಗೊತ್ತಾಗಲಿಲ್ಲ. ಆರೋಪಿಯ ಊರಿನ ಮಲ್ಲಿಕ ಎನ್ನುವವರು, ಏನೋ ಗಲಾಟೆ ನಡೆಯುತ್ತಿತ್ತು, ಆರೋಪಿಯ ಮನೆಯೊಳಗೆ ಅಂತ ನನಗೆ ಹೇಳಿದ್ದರು. ಭಾನುವಾರ,ರಾತ್ರಿ 12.00 ಗಂಟೆವರೆಗೆ ಪೊಲೀಸ್ ಠಾಣೆಯಲ್ಲಿ ಇದ್ದೆನು. ಸೋಮವಾರ ಸಂಜೆ ಅಂದಾಜು 5.00 ಗಂಟೆಯಲ್ಲಿ , ನನ್ನ ಮಗಳ ಶವವನ್ನು ಆಸ್ಪತ್ರೆಯವರು ಕೊಟ್ಟಿದ್ದರು. ಪೊಲೀಸ್ ಠಾಣೆಯಲ್ಲಿ ನನ್ನ ಗಂಡ ದೂರನ್ನು ಕೊಡುವಾಗ ನಾನೂ ಸಹ ಇದ್ದೆನು. ದೂರನ್ನು ಕೊಡುವುದಕ್ಕೆ ಮುಂಚೆ, ಆಸ್ಪತ್ರೆಯ ಆವರಣದಲ್ಲಿ, ಯಾವುದೇ ಪಂಚಾಯಿತಿ ಅಥವಾ ಮಾತುಕತೆ ನಡೆಯಲಿಲ್ಲ. 3 ದಿನಗಳು ಆದ ಮೇಲೆ, ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡರು.

8) ನಾನು ಪೊಲೀಸರ ಮುಂದೆ ಕೊಟ್ಟಿರುವ ಹೇಳಿಕೆಯಲ್ಲಿ, ‘2 ನೇ ಆರೋಪಿ, ಮೃತೆ ಮಾಲಿನಿಯನ್ನು, ನೀನು ಊಟ ಮಾಡಿಕೊಂಡು ಮನೆಯಲ್ಲಿ ಕುಳಿತಿದ್ದಿಯಾ, ಕೆಲಸಕ್ಕೆ ಹೋಗು, ನಾನೇ ಮಗುವನ್ನು ನೋಡಿಕೊಳ್ಳುತ್ತೇನೆ ಅಂತ ಗಲಾಟೆ ಮಾಡುತ್ತಿದ್ದರು ’ ಎಂಬ ವಿಷಯವನ್ನು, ಹೇಳಿರುವುದಿಲ್ಲ,ಯಾಕೆಂದರೆ, ನನ್ನ ಮಗಳನ್ನು ಕಳೆದುಕೊಂಡಿರುವ ಗಾಬರಿ ಮತ್ತು ಚಿಂತೆಯಲ್ಲಿ ಇದ್ದುದರಿಂದ ಈ ಅಂಶವನ್ನು ಪೊಲೀಸರ ಮುಂದೆ ಹೇಳಲು ಆಗಿರಲಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ. ಆರೋಪಿಗಳು, ನನ್ನ ಮೊಮ್ಮಕ್ಕಳನ್ನು, ಕರೆದುಕೊಂಡು ಹೋಗಿ, ಅವರ ಬಳಿ ಇಟ್ಟುಕೊಂಡಿದ್ದಾರೆ, ನಾವು ಕೇಳಿದ್ದರೂ ಸಹ, ನಮಗೆ ಮೊಮ್ಮಕ್ಕಳನ್ನು ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು, ಸ್ವತಃ ನುಡಿಯುತ್ತಾರೆ, ಭಾನುವಾರದ ದಿವಸ, ರಾತ್ರಿ 9.00 ಗಂಟೆ ಆಗಿದ್ದರಿಂದ,

ಮೊಮ್ಮಕ್ಕಳಿಗೆ ಆಸ್ಪತ್ರೆಯಲ್ಲಿ ಸೊಳ್ಳೆ ಗಳು ಕಚ್ಚುತ್ತಿದ್ದುದರಿಂದ, ಮೊಮ್ಮಕ್ಕಳನ್ನು ಕರೆದುಕೊಂಡು ಹೋಗಿ ಕಿರಿಗಸೂರಿನಲ್ಲಿ ಬಿಡು ಅಂತ ಹೇಳಿ 1 ನೇ ಅರೋಪಿಯ ಅಣ್ಣನ ಹೆಂಡತಿಯ ಕೈಗೆ ಕೊಟ್ಟಿದ್ದೆನು. ಆಗ, ಆಕೆ, ಮೊಮ್ಮಕ್ಕಳನ್ನು ಕರೆದುಕೊಂಡು ಹೋಗಿ ವಡ್ಡರಹಳ್ಳಿಯಲ್ಲಿ ಇರಿಸಿಕೊಂಡಿದ್ದರು, ಮರು ದಿವಸ ಸೋಮವಾರ ಬೆಳಿಗ್ಗೆ, ನನ್ನ ಮಗ ವಡ್ಡರಹಳ್ಳಿಗೆ ಹೋಗಿ, ಮೊಮ್ಮಕ್ಕಳನ್ನು ಕೊಡುವಂತೆ ಕೇಳಿದಾಗ, 1 ನೇ ಆರೋಪಿಯ ಅಣ್ಣನ ಹೆಂಡತಿ, ಮೊಮ್ಮಕ್ಕಳನ್ನು ಕೊಡಲಿಲ್ಲ ಎನ್ನುತ್ತಾರೆ. ನನ್ನ ಮೊಮ್ಮಕ್ಕಳಿಬ್ಬರೂ, ಈಗ ಕಾನ್ವೆಂಟ್ ನಲ್ಲಿ ಓದುತ್ತಿದ್ದಾರೆ, ಅವರನ್ನು ನನ್ನ ಅಳಿಯ (1 ನೇ ಆರೋಪಿ) ಓದಿಸುತ್ತಿದ್ದಾರೆ. ರಜೆಯ ದಿನಗಳಲ್ಲಿ ಮತ್ತು ಹಬ್ಬ ಹರಿದಿನಗಲ್ಲಿ, ನನ್ನ ಮೊಮ್ಮಕ್ಕಳು, ನಮ್ಮ ಮನೆಗೆ ಬಂದು ಹೋಗುತ್ತಾರೆ ಎಂದರೆ ಸರಿಯಲ್ಲ.

9) ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ '' ಭಾನುವಾರ ದಿವಸ ನಾವು ಆಸ್ಪತ್ರೆಗೆ ಹೋದಾಗ, ನನ್ನ ಮಗಳ ದೇಹದಲ್ಲಿ, ಮಣಿ ಕಟ್ಟು ನೀಲಿಕಟ್ಟಿತ್ತು, ಬಲ ತೊಡೆ ನೀಲಿಗಟ್ಟಿತ್ತು, ಆಕೆಗೆ ಚೆನ್ನಾಗಿ ಹೊಡೆದಿದ್ದರು, ಮೈ ಮೇಲೆಲ್ಲಾ ನೀಲಿಗಟ್ಟಿತ್ತು '' ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, '' ಆಸ್ಪತ್ರೆಯಲ್ಲಿ, ಆರೋಪಿಯ ಪಕ್ಕದ ಮನೆಯವರು ನನಗೆ ಸಿಕ್ಕಿದ್ದರು '' ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ, ''ಅವರನ್ನು ವಿಚಾರಿಸಿದಾಗ, ಅವರು ರಾತ್ರಿ ಜಗಳವಾಗಿ, ನಿಮ್ಮ ಮಗಳು ತುಂಬಾ ಕಿರುಚಾಡುತ್ತಿದ್ದಳು, ನಾವು ಹೋಗಿ ಜಗಳ ಬಿಡಿಸಿದೆವು, ನಾವು ಹೋಗಿ ಜಗಳ ಬಿಡಿಸಿದೆವು, ಮಾರನೆಯ ದಿನ ಭಾನುವಾರ ನಿಮ್ಮ ಮಗಳು ಅವರ ಮನೆಯ ಬಾಗಿಲಲ್ಲಿ ಕಸ ಗುಡಿಸುತ್ತಿದ್ದಾಗ, ಯಾಕೆ ಮನೆಯಲ್ಲಿ ನಿಮ್ಮ ಮನೆಯಲ್ಲಿ ಕಿರುಚಾಡುತ್ತಿದ್ದೆ ಎಂದು ಕೇಳಿದಾಗ, ಅದಕ್ಕೆ ನನ್ನ ಮಗಳು ರಾತ್ರಿ ಜಗಳವಾಯಿತು ಎಂದು ಹೇಳಿದ್ದಳು. ಅದೇ ದಿನ ಭಾನುವಾರ ಬೆಳಿಗ್ಗೆ ನನ್ನ ಮಗಳು ಒಂದು ಬೇಸಿನ್ ತುಂಬಾ ಇದ್ದ ಬಟ್ಟೆಯನ್ನು ಹೊಗೆಯುತ್ತಿದ್ದುದನ್ನು ಪಕ್ಕದ ಮನೆಯವರು ನೋಡಿದ್ದಾಗಿ ನನಗೆ ಹೇಳಿದರು. ಬಟ್ಟೆ ಹೊಗೆಯುತ್ತಿದ್ದ ನಿಮ್ಮ ಮಗಳು ಒಳಗೆ ಹೋದಳು, ಪುನಃ ಕಿರುಚಾಡುತ್ತಿದ್ದಳು, ಆಗ ಹೊಡೆದು ನೇಣು ಹಾಕಿದ್ದಾರೆ ಎಂದು ಪಕ್ಕದ ಮನೆಯವರು ನನಗೆ ಹೇಳಿದರು. ನನ್ನ ಮಗಳಿಗೆ ಆರೋಪಿತರ ಮನೆಯವರು ವರದಕ್ಷಿಣೆ ಕಿರುಕುಳವನ್ನು ನೀಡಿ ಆಕೆಗೆ ಹೆಡೆದು ನೇತು ಹಾಕಿದ್ದಾರೆ '' ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

10) ಮದುವೆ ಮಾತುಕತೆಯಲ್ಲಿ, ಆರೋಪಿಯ ಮನೆಯವರು, ನಮಗೆ, ಚಿನ್ನದ ಬ್ರಾಸ್ಲೈಟ್, ಒಂದು ಚಿನ್ನದ ಉಂಗುರ, ಒಂದು ಲಕ್ಷ ನಗದು ಹಣವನ್ನು 1 ನೇ ಆರೋಪಿಗೆ ಕೊಡಬೇಕು ಅಂತ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಿನ್ನದ ಬ್ರಾಸ್ಲೈಟ್ ನ್ನು ಕೊಡುವ ಬದಲು, 50 ಸಾವಿರ ರೂ. ನಗದು ಹಣವನ್ನು ನನ್ನ ಮಗಳ ಕೈಯಲ್ಲಿ ಕೊಟ್ಟು, 1 ನೇ ಆರೋಪಿಗೆ ಕೊಡು ಅಂತ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಉಳಿಕೆ ಬಾಕಿ 50 ಸಾವಿರ ರೂ. ಹಣವನ್ನು ಕೊಡುವಂತೆ ಆರೋಪಿ ಮನೆಯವರು ನನ್ನ ಮಗಳಿಗೆ ಒತ್ತಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

(ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ, ಬಾಕಿ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು).

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

**ದಿನಾಂಕ ಃ 27.08.2024 ರಂದು ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಬೋಧಿಸಲಾಗಿದೆ.**

**ಮುಂದುವರೆದ ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ .ಎಂ ವಕೀಲರಿಂದ ಃ**

1) ಮೃತ ಮಧು ಮಾಲಿನಿ ನನಗೆ ಒಬ್ಬಳೇ ಮಗಳು ಆಗಿದ್ದರಿಂದ, ಅವಳನ್ನು ನಾನು ತುಂಬಾ ಚೆನ್ನಾಗಿ ಸಾಕಿದ್ದೆನು ಎಂದರೆ ಸರಿ. ನನ್ನ ಮಗಳನ್ನು ಆರೋಪಿತರ ಮನೆಗೆ ಮದುವೆ ಮಾಡಿಕೊಟ್ಟ ಮೇಲೆ, ಆರೋಪಿತರ ಕುಟುಂಬ ಒಟ್ಟು ಕುಟುಂಬ ಆಗಿದ್ದರಿಂದ, ನನ್ನ ಮಗಳಿಗೆ ಅಲ್ಲಿ ಇರಲು ಇಷ್ಟ ಇಲ್ಲದೇ ಇದ್ದುದರಿಂದ, ಬೇರೆ ಮನೆ ಮಾಡಿಕೊಂಡು, ನನ್ನ ಮಗಳು ಮತ್ತು ಆರೋಪಿತರು ಒಟ್ಟಿಗೆ ಇದ್ದರು ಎಂದರೆ ಸರಿಯಲ್ಲ. ಬೇರೆ ಮನೆಯಲ್ಲಿ ವಾಸ ಇರುವಾಗ, ನನ್ನ ಮಗಳು, 2 ನೇ

ಆರೋಪಿಗೆ ಸರಿಯಾಗಿ ಊಟ ಉಪಚಾರವನ್ನು ನೋಡಿಕೊಳ್ಳದೇ ಇದ್ದಾಗ, 2 ನೇ ಆರೋಪಿ, ನಾನು ಮಳವಳ್ಳಿಯಲ್ಲಿ ನನ್ನ ಪಿಂಚಣಿಯಿಂದ ವಾಸ ಮಾಡುತ್ತೇನೆ, ನೀವು ಇಬ್ಬರೂ ಚೆನ್ನಾಗಿ ಇರಿ ಅಂತ ನನ್ನ ಮಗಳಿಗೆ ಮತ್ತು 1 ನೇ ಆರೋಪಿಗೆ ಹೇಳಿದ್ದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ, 2 ನೇ ಆರೋಪಿಗೆ, ನನ್ನ ಹೆಂಡತಿಗೆ ಬುದ್ದಿವಾದ ಹೇಳುತ್ತೇನೆ, ನೀವು ಹೊರಗಡೆ ಹೋಗಿ ಬೇರೆ ವಾಸ ಇರುವುದು ಬೇಡ ಎಂದು ಜೊತೆಯಲ್ಲೆ ಇರಿಸಿಕೊಂಡಿದ್ದರು ಎಂದರೆ ಸಾಕ್ಷಿಯು, ಅವರುಗಳು, ಎಲ್ಲೂ ಬೇರೆ ಮನೆ ಮಾಡಿಕೊಂಡು ಹೋಗಿರಲಿಲ್ಲ, ಎಲ್ಲರೂ ಜೊತೆಯಲ್ಲೆ ಇದ್ದರು ಹಾಗೂ ನನ್ನ ನನ್ನ ಮಗಳಿಗೆ ಒಟ್ಟು ಕುಟುಂಬದಲ್ಲಿ ಇರುವುದಕ್ಕೆ ಆಸೆ ಇತ್ತು ಎಂದು ನುಡಿಯುತ್ತಾರೆ. 1 ನೇ ಆರೋಪಿ, 2 ನೇ ಆರೋಪಿಗೆ ಮನೆಯಿಂದ ಹೊರಗಡೆ ಹೋಗಿ ಬೇರೆ ವಾಸಿಸುವುದಕ್ಕೆ ಅವಕಾಶವನ್ನು ಮಾಡಿಕೊಡದೇ ಇದ್ದುದರಿಂದ, ನನ್ನ ಮಗಳು, 1 ಮತ್ತು 2 ನೇ ಆರೋಪಿತರೊಂದಿಗೆ, ಜಗಳವನ್ನು ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಈ ವಿಷಯವನ್ನು, 1 ನೇ ಆರೋಪಿ, ನನ್ನ ಗಮನಕ್ಕೆ ತಂದಿದ್ದರು ಎಂದರೆ ಸರಿಯಲ್ಲ. ಆಗ ನಾನು, 1 ನೇ ಆರೋಪಿ (ಅಳಿಯ) ಗೆ, ಒಬ್ಬಳೇ ಮಗಳು, ಮುದ್ದಾಗಿ ಬೆಳೆಸಿದ್ದೇವೆ, ನೀನೆ ಸ್ವಲ್ಪ ಅನುಸರಿಕೊಂಡು ಹೋಗಬೇಕು ಅಂತ ಬುದ್ದಿ ಮಾತನ್ನು ಹೇಳಿದ್ದೆನು ಎಂದರೆ ಸರಿಯಲ್ಲ. 1 ನೇ ಆರೋಪಿ, 2 ನೇ ಆರೋಪಿ(ತಂದೆ)ಗೆ ಮನೆಯಿಂದ ಹೊರಗಡೆ ಹೋಗಲು ಅವಕಾಶ ಮಾಡಿಕೊಡದೇ ಇದ್ದುದರಿಂದ, ನನ್ನ ಮಗಳೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ, ಜೈಲಿಗೆ ಕಳುಹಿಸುತ್ತೇನೆ, ನಿಮ್ಮ ಮೇಲೆ ಬರೆದು ಇಡುತ್ತೇನೆ ಅಂತ 1 ಮತ್ತು 2 ನೇ ಆರೋಪಿಗಳಿಗೆ ಹೆದರಿಸುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು, ಹಠವಾದಿ ಆಗಿದ್ದರಿಂದ, ಯಾರ ಮಾತನ್ನು ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ, ಪೀರಿಯಡ್ಸ್ ಆದ ಸಮಯದಲ್ಲಿ, ತುಂಬಾ ರಕ್ತಸ್ರಾವ ಆಗಿದ್ದರಿಂದ, ಮೈಸೂರಿನ ಆಸ್ಪತ್ರೆಯಲ್ಲಿ ಆಕೆಗೆ ತೋರಿಸಿದ್ದೆನು ಎಂದರೆ ಸರಿಯಲ್ಲ. ಈ ರೀತಿ ನನ್ನ ಮಗಳು ಅನಾರೋಗ್ಯಕ್ಕೆ ತುತ್ತಾಗಿದ್ದರಿಂದ ಮತ್ತು ಒಂದನೇ ಆರೋಪಿ, ಆತನ ತಂದೆಯಾದ 2 ನೇ ಆರೋಪಿಯನ್ನು ಮನೆಯಿಂದ ಹೊರಗಡೆ ಹೋಗುವುದಕ್ಕೆ ಅವಕಾಶ ಮಾಡಿಕೊಡದೇ ಇದ್ದುದರಿಂದ, ನನ್ನ ಮಗಳೇ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಆರೋಪಿಗಳು, ವರದಕ್ಷಿಣೆಯಾಗಿ 50 ಗ್ರಾಂ ಚಿನ್ನದ ಕತ್ತಿನ ಸರ, ಒಂದು ಚಿನ್ನದ ಉಂಗುರ, ಒಂದು ಲಕ್ಷ ನಗದು, ಹುಡುಗಿಗೆ ಒಡವೆ ಮತ್ತು ಚೌಲ್ಟ್ರಿಯಲ್ಲಿ ಮದುವೆ ಮಾಡಿಕೊಡಬೇಕು ಅಂತ, ಬೇಡಿಕೆ ಇಟ್ಟಿದ್ದರು ಎಂದರೆ ಸರಿಯಲ್ಲ. ಬಾಕಿ ಉಳಿಸಿಕೊಂಡಿದ್ದ 50 ಸಾವಿರ ರೂ. ವರದಕ್ಷಿಣೆ ಹಣಕ್ಕೆ 1 ನೇ ಆರೋಪಿ, ನನ್ನ ಮಗಳಿಗೆ ಬೈಯುವುದು, ಹೊಡೆಯುವುದು, ಹಿಂಸೆ ಕೊಡುತ್ತಿದುದ್ದರಿಂದ ಕಾರಣಕ್ಕೆ, ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಳು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸರ ಮುಂದೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆಯನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳೇ ಸ್ವತಃ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದು, ಈ ವಿಷಯವನ್ನು ಮುಚ್ಚಿಟ್ಟು, ಆರೋಪಿಗಳಿಗೆ ತೊಂದೆಯಾಗಲೀ ಎಂದು ಅವರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.